(ಇಂದು ದಿನಾಂಕ 14-01-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**<u>ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಂ.ಬಿ.ಎನ್. ವಕೀಲರಿಂದಃ</u>**

8 ಔಷಧಿ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ. 48 ಎಂದು, ಡಿಸ್ಚಾರ್ಜ ಸಮ್ಮರಿಯನ್ನು ನಿ.ಪಿ.49 ಎಂದು, ಎಂ.ಆರ್.ಐ. ರಿಪೋರ್ಟನ್ನು ನಿ.ಪಿ. 50 ಎಂದು,

ಎಂ.ವಿ.ಸಿ. ನಂ. 376/24

ಪಿ.ಡಬ್ಲ್ಯು. 1

Echocardigogra ವನ್ನು ನಿ.ಪಿ. 51 ಎಂದು, ಇ.ಸಿ.ಜಿ. ರಿಪೋರ್ಟನ್ನು ನಿ.ಪಿ. 52 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಎದ್ರುದಾರರ ಪರ ಶ್ರೀ ಮತಿ ಎಸ್.ಎಂ.ಹೆಚ್. ವಕೀಲರಿಂದ</u>**

ನನಗೆ ಅಪಘಾತವಾಗಿ ಒಂದುವರೆ ವರ್ಷವಾಗಿದೆ. ನಾನು ಈ ಅರ್ಜಿಯನ್ನು ಪರಿಹಾರ ಧನ ಕೇಳಿ ಸಲ್ಲಿಸಿದ್ದೇನೆ ಎಂದರೆ ಸರಿ. ನನಗೆ ಅಪಘಾತದಲ್ಲಿ ಆದಂತಹ ತೊಂದರೆಗಳಿಗೆ ಸಂಬಂಧಪಟ್ಟಂತಹ ದಾಖಲಾತಿಗಳನ್ನು ಈಗಾಗಲೇ ಹಾಜರುಪಡಿಸಿದ್ದೇನೆ. ಈ ಕೇಸು ಮುಗಿಯುವ ಹಂತದಲ್ಲಿ ಬಂದಿತ್ತು ಎಂದರೆ ಸರಿ. ಅಪಘಾತದಲ್ಲಿ ನನಗೆ ಮುಖಕ್ಕೆ, ತಲೆಗೆ, ಕೈಗೆ ಮತ್ತು ಕಾಲಿಗೆ ಏಟಾಗಿತ್ತು. ನಾನು ಹಾಜರುಪಡಿಸಿದಂತಹ ಗಾಯದ ಪ್ರಮಾಣಪತ್ರದಲ್ಲಿ ತಲೆಗೆ ರಕ್ತದ ಗಾಯ, ಎಡಗಾಲಿನ ತೊಡೆಗೆ ರಕ್ತಗಾಯ ಆಗಿತ್ತು ಎಂದು ನಮೂದಿಸಿದ್ದಾರೆ ಎಂದರೆ ಸರಿ. ಯಲ್ಲಾಪುರ, ಕಾರವಾರ ಮತ್ತು ಕೆ.ಎಸ್. ಹೆಗಡೆ ಆಸ್ಪತ್ರೆ, ಮಂಗಳೂರಿನಲ್ಲಿ ಗಾಯದ ಪ್ರಮಾಣಪತ್ರದಲ್ಲಿ ತೋರಿಸಿದ ಗಾಯಗಳಿಗೆ ಮಾತ್ರ ಚಿಕಿತ್ಸೆ ಕೊಟ್ಟಿದ್ದಾರೆ ಎಂದರೆ ಸರಿ. ನಾನು ಹೇಳಿದಂತಹ ಅಪಘಾತಕ್ಕೂ ಮತ್ತು ಈ ದಿನ ಹಾಜರುಪಡಿಸಿದಂತಹ ದಾಖಲಾತಿಗಳಿಗೂ ಯಾವುದೇ ಸಂಬಂಧ ಇಲ್ಲ ಅನ್ನುವುದು ಸರಿಯಲ್ಲ. ಆಸ್ಪತ್ರೆಯಿಂದ ಬಿಡುಗಡೆಯಾಗುವ ಸಮಯದಲ್ಲಿ ಆಸ್ಪತ್ರೆಯವರು ಕೊಟ್ಟಂತಹ ಬಿಲ್‌ನ್ನು ಈಗಾಗಲೇ ನಿ.ಪಿ. 33 ಎಂದು ಗುರುತಿಸಲಾಗಿದೆ ಎಂದರೆ ಸರಿ. ಅದೇ ಬಿಲ್‌ನ್ನು ಈ ದಿನ ಡಿಸ್ಚಾರ್ಜ ಸಮ್ಮರಿ ಎಂದು ಹಾಜರುಪಡಿಸಿ ಅದನ್ನು ನಿ.ಪಿ. 49 ಎಂದು ಗುರುತಿಸಿಕೊಂಡಿದ್ದೇನೆ ಎಂದರೆ ಸರಿ. ನನಗೆ ಆದಂತಹ ಅಪಘಾತದ ಸಮಯದಲ್ಲಿ ನನಗೆ ಎದೆಗೆ ತೊಂದರೆಯಾಗಿದೆ ಎಂದು ವೈದ್ಯಾಧಿಕಾರಿಗಳಿಗೆ ಹೇಳಿಲ್ಲ ಅನ್ನುವುದು ಸರಿಯಲ್ಲ. ವೈದ್ಯಾಧಿಕಾರಿಗಳು ನನ್ನ ಹೃದಯಕ್ಕೆ ತೊಂದರೆ ಇದೆ ಎಂದು ಹೇಳಿಲ್ಲ ಅನ್ನುವುದು ಸರಿಯಲ್ಲ. ನಾನು ಆಸ್ಪತ್ರೆಯಿಂದ ಬಿಡುಗಡೆಯಾದ 7 ತಿಂಗಳ ನಂತರ ಎಂ.ಆರ್.ಐ. ಸ್ಕ್ಯಾನ್ ಮಾಡಿದ್ದಾರೆ ಎಂದರೆ ಸರಿ. ಇ.ಸಿ.ಜಿ.ಯನ್ನು ಜನವರಿ 8 ನೇ ತಾರೀಖಿನಂದು ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ಡಿಸ್ಚಾರ್ಜ ಸಮ್ಮರಿಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಬರಬೇಕು ಎಂದು ನಮೂದಿಸಿಲ್ಲ ಎಂದರೆ ಸರಿ. ಈ ದಿನ

ಎಂ.ವಿ.ಸಿ. ನಂ. 376/24

ಪಿ.ಡಬ್ಲ್ಯು. 1

ನಾನು ಹಾಜರುಪಡಿಸಿದಂತಹ ದಾಖಲಾತಿಗಳು ನಾನು ಹೇಳಿದಂತಹ ಅಪಘಾತಕ್ಕೆ ಸಂಬಂಧಿಸಿದ ದಾಖಲಾತಿಗಳು ಅಲ್ಲ ಅನ್ನುವುದು ಸರಿಯಲ್ಲ. ನನಗೆ ಯಾವುದೇ ಶಸ್ತ್ರಚಿಕಿತ್ಸೆ ಆಗಿಲ್ಲ ಮತ್ತು ಕೈಯಲ್ಲಿ ಇನಪ್ಲಾಂಟ್‌ನ್ನು ಅಳವಡಿಸಿಲ್ಲ ಅನ್ನುವುದು ಸರಿಯಲ್ಲ. ನನಗೆ ಅಪಘಾತದಲ್ಲಿ ಹೃದಯಕ್ಕೆ ತೊಂದರೆಯಾಗಿದೆ ಎಂದು ಹೇಳುವ ಯಾವುದೇ ದಾಖಲಾತಿಗಳು ಇಲ್ಲ ಅನ್ನುವುದುಸ ರಿಯಲ್ಲ. ನಾನು ಬೇರೆ ಯಾವುದೋ ಬೇರೆ ಕಾರಣದಿಂದ ನನಗೆ ಅನಾರೋಗ್ಯಗೊಂಡು ಚಿಕಿತ್ಸೆ ತೆಗೆದುಕೊಂಡಿದ್ದು ಅಪಘಾತಕ್ಕೂ ಮತ್ತು ನಾನು ಹಾಜರುಪಡಿಸಿದಂತಹ ಇ.ಸಿ.ಜಿ. ಮತ್ತು ಇಕೋ ಸ್ಕ್ಯಾನಿಂಗ್‌ಗೆ ಯಾವುದೇ ಸಂಬಂಧ ಇಲ್ಲ ಅನ್ನುವುದು ಸರಿಯಲ್ಲ. ಎಂ.ಆರ್.ಐ. ಮಾಡಿಸಲು ವೈದ್ಯಾಧಿಕಾರಿಗಳು ಸಲಹೆ ಮಾಡಿದ್ದಾರೆ. ಸದರಿ ವೈದ್ಯಾಧಿಕಾರಿಗಳು ಆ ರೀತಿ ಸಲಹೆ ಕೊಟ್ಟಿದ್ದಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ಹೆಚ್ಚಿನ ಪರಿಹಾರ ಧನ ಬರಲಿ ಎಂದು ದಾಖಲಾತಿಗಳನ್ನು ಸೃಷ್ಠಿ ಮಾಡಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ, ಕಾರವಾರ